**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರಃ 1828-2015**

ಸರ್ಕಾರದ ಪರ
ಕುಂದಾಪುರ ಠಾಣಾ ಪೊಲೀಸರು. --- ಪಿರ್ಯಾದಿದಾರರು

-ಮತ್ತು-

1. ದಾಸ ಖಾರ್ವಿ, 59 ವರ್ಷ,
ತಂದೆಃ ಚಂದ್ರ ಖಾರ್ವಿ,
ವಾಸಃ ಶ್ರೀ ಗಣೇಶ, ಖಾರ್ವಿ ಮೇಲ್ಕೇರಿ,

2. ರತ್ನಾಬಾಯಿ, 50 ವರ್ಷ,
ಗಂಡಃ ದಾಸ ಖಾರ್ವಿ,

3. ಮಹೇಶ ಖಾರ್ವಿ, 32 ವರ್ಷ,
ತಂದೆಃ ದಾಸ ಖಾರ್ವಿ,

1 ರಿಂದ 3 ನೇಯವರ ವಾಸಃ
ಖಾರ್ವಿಕೇರಿ, ಕಸಬಾ ಗ್ರಾಮ,
ಕುಂದಾಪುರ ತಾಲೂಕು --- ಆರೋಪಿತರು

**ಃದೋಷಾರೋಪಣೆಃ**

ಶ್ರೀಮತಿ ನಾಗರತ್ನಮ್ಮ ಬಿ.ಎ.ಎಲ್., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 29.03.2015 ರಂದು ಮಧ್ಯಾಹ್ನ 12.00 ಗಂಟೆಗೆ ಕುಂದಾಪುರ ತಾಲೂಕು ಕಸಬಾ ಗ್ರಾಮದ ಖಾರ್ವಿಕೇರಿ ಮೇಲ್ಕೇರಿ ಎಂಬಲ್ಲಿ ಸಾಕ್ಷಿ 1 ನೇಯವರಿಗೆ ಸೇರಿದ ತೆಂಗಿನ ಮರದಿಂದ ತೆಂಗಿನ ಕಾಯಿ ತೆಗೆಯುತ್ತಿದ್ದಾಗ ಸಾಕ್ಷಿ 1 ನೇಯವರು ಆಕ್ಷೇಪಿಸಿದ್ದಕ್ಕೆ 1 ರಿಂದ 3 ನೇ ಆಪಾದಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ 1 ನೇಯವರ ಸ್ಥಳಕ್ಕೆ ಅಕ್ರಮ ಪ್ರವೇಶ ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿದ್ದ 1 ರಿಂದ 3 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಸಾಕ್ಷಿ 1 ನೇಯವರಿಗೆ 1 ನೇ ಆಪಾದಿತರಾದ ನೀವು ಕೊಡಲಿಯಿಂದ ಕೈಗೆ ಹಲ್ಲೆ ಮಾಡಿದ್ದು, 2 ನೇ ಆಪಾದಿತರಾದ ನೀವು ಕಲ್ಲಿನಿಂದ ಬೆನ್ನಿಗೆ ಹಲ್ಲೆ ಮಾಡಿದ್ದು ಹಾಗೂ 3 ನೇ ಆಪಾದಿತರಾದ ನೀವು ಕಾಯಿ ಬೊಂಡದಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಗೊಳಿಸಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ ಸಮಯ ಹಾಗೂ ಸ್ಥಳದಲ್ಲಿದ್ದ 1 ರಿಂದ 3 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಸಾಕ್ಷಿ 1 ನೇಯವರಿಗೆ ಕೈಯಿಂದ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ಗಾಯಗೊಳಿಸಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿ. 16.10.2019

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

RMS